ಎಂ ವಿ ಸಿ ನಂಃ 539/2022
ಆರ್. ಡಬ್ಲ್ಯೂ-1

**(ಇಂದು ದಿನಾಂಕ 11-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀಮತಿ ಎಸ್ ಎಫ್ ಎಂ ವಕೀಲರಿಂದ**

ಅಪಘಾತದ ದಿನ ಹಳಿಯಾಳದಿಂದ ಕಲಘಟಗಿ ಮಾರ್ಗದಲ್ಲಿ ಹೋಗುತ್ತಿದ್ದೆವು . ಮೋಟರ ಸೈಕಲ ಸವಾರನು ರಸ್ತೆಯಲ್ಲಿ ಜಿಗ್ ಜ್ಯಾಗ್ ಮಾಡಿಕೊಂಡು ಬರುತ್ತಿದ್ದ ಆದರಿಂದ ತೊಂದರೆ ಆಗಬಹುದು ಎನ್ನುವ ಕಾರಣಕ್ಕಾಗಿ ನಾನು ನನ್ನ ಬಸ್ಸನ್ನು ರಸ್ತೆಯ ಎಡಬದಿಗೆ ತೆಗೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಮೋಟರ ಸೈಕಲ ಸವಾರನ ವಿರುದ್ದ ನಾನು ದೂರು ದಾಖಲಿಸಿಲ್ಲ . ಪೊಲೀಸರು ನನ್ನ ವಿರುದ್ದ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ . ಪೊಲಿಸರು ನನ್ನ ವಿರುದ್ದ ಸಲ್ಲಿಸಿರುವ ಆರೋಪ ಪಟ್ಟಿಯನ್ನು ಹಳಿಯಾಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ . ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ಬೈಕ ಸವಾರನ ತಪ್ಪಿನಿಂದ ಆಗಿರುವುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ೦ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.